# ಕೃತಕ ಗರ್ಭಧಾರಣೆಗೆ ವಯಸ್ಸಿನ ಮಿತಿ ಇನ್ನಿಲ್ಲ

ಹೀಗೆ ಯಾವುದೇ ಕಾರಣದಿಂದ ಮದುವೆ ಹಾಗೂ ಮಕ್ಕಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾದರೂ ಇಂದಿನ ಮಹಿಳೆಯರು ಆತಂಕ ಪಡುವ ಅಗತ್ಯವಿಲ್ಲ ಎನ್ನುತ್ತಾರೆ ಸ್ತ್ರೀರೋಗ ತಜ್ಞೆ ಡಾ. ಕಾಮಿನಿ ರಾವ್.

ಪುರುಷ ಹಾಗೂ ಸ್ತ್ರೀ ಪ್ರಜನನ ಅಣುಗಳನ್ನು ಪ್ರಯೋಗಾಲಯದಲ್ಲಿ ಜೊತೆಗೂಡಿಸಿ ರೂಪಿಸಿದ ಭ್ರೂಣಗಳನ್ನು ಕೃತವಾಗಿ ಮಹಿಳೆಯರ ಗರ್ಭಾಶಯದಲ್ಲಿ ಜೋಡಿಸುವ ಪ್ರಕ್ರಿಯೆಯೇ 'ಕೃತಕ ಗರ್ಭಧಾರಣೆ'. ಈ ವಿಳಂಬಿತ ತಾಯ್ತನ ಅಥವಾ ಕೃತಕ ಗರ್ಭಧಾರಣೆ ಈಗ ಸುಲಲಿತ. ಮಾತ್ರವಲ್ಲ, ಅದಕ್ಕೆ ವಯಸ್ಸಿನ ಮಿತಿಯೇ ಇಲ್ಲ ಎಂಬುದು ಬಹಳಷ್ಟು ಉದ್ಯಮಶೀಲ ಹಾಗೂ ವೃತ್ತಿಪರ ಮಹಿಳೆಯರಿಗೆ ಸಂತಸದ ಸಂಗತಿಯೇ.

ಋತುಬಂಧ ನಿಂತ ಬಳಿಕ ಅಥವಾ 40ನೇ ವಯಸ್ಸನ್ನು ದಾಟಿದ ನಂತರವೂ ಈಗ ಸುರಕ್ಷಿತ ತಾಯ್ತನ ಅನುಭವಿಸಬಹುದು. ಕೆಲವೊಮ್ಮೆ ಗರ್ಭ ಧರಿಸಲು ಅಂಡಾಶಯ ಸಮರ್ಥವಾಗಿದ್ದರೂ ಅಂಡಾಣು ಬಿಡುಗಡೆ ಅಸಾಧ್ಯವಾಗಿರುತ್ತದೆ. ಈ ಹಂತದಲ್ಲಿ ದಾನಿಗಳಿಂದ ಅಂಡಾಣುಗಳನ್ನು ಪಡೆದು ಗರ್ಭ ಧರಿಸುವಂತೆ ಮಾಡಲಾಗುತ್ತದೆ. ಇದಕ್ಕೆ ಶಸ್ತ್ರಚಿಕಿತ್ಸೆಯ ಅಗತ್ಯವೂ ಇಲ್ಲ. ಅರಳ ಅರವಳಿಕೆಯ ಮೂಲಕ ಅದನ್ನು ಸಾಧಿಸಬಹುದು. ಆದರೆ ಇದೊಂದು ಸಂಕೀರ್ಣ ವ್ಯವಸ್ಥೆಯೆಂದೇ ಹೇಳಬಹುದು.

ಕಳೆದ ಒಂದು ದಶಕದ ಅವಧಿಯಲ್ಲಿ ಈ ಮಾದರಿಯ ಗರ್ಭಧಾರಣೆಗೆ ಮುಂದಾಗುವ 35ರಿಂದ 40ರ ವಯೋಮಾನದ ಮಹಿಳೆಯರ ಸಂಖ್ಯೆಯಲ್ಲಿ ಶೇ 50ರಷ್ಟು ಹೆಚ್ಚಳ ಉಂಟಾಗಿದೆ ಎನ್ನುತ್ತಾರೆ ಡಾ.ಕಾಮಿನಿ. ಇದರಿಂದ ಇಳಿವಯಸ್ಸಿನಲ್ಲಿಯೂ ಆರೋಗ್ಯವಂತ ಮಗುವನ್ನು ಪಡೆಯಲು ಸಾಧ್ಯ. ಆದರೆ ತಾಯ್ತನ ಅನುಭವಿಸಲು ತಾಯಿ ಮಾನಸಿಕ ಸಿದ್ಧತೆಯನ್ನು ಹೊಂದಿರಬೇಕಾದ ಅಗತ್ಯವಿದೆ.